ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಹೌದು.

485 ಮುಖ್ಯ ಶಿಕ್ಷಕರ 970 ಸಹ ಶಿಕ್ಷಕರ ಹಾಗೂ 485 "ಡಿ" ಗ್ರೂಪ್ ದರ್ಜೆ ನೌಕರರ ಹುದ್ದೆಗಳು ಮಂಜೂರಾಗಿದೆ.

ಆ) 2006–07ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ 485 ಪ್ರೌಢಶಾಲೆಗಳಲ್ಲಿ 276 ಪ್ರೌಢಶಾಲೆಗಳಿಗೆ ಆರ್.ಐ.ಡಿ.ಎಫ್. 12ರಡಿಯಲ್ಲಿ ಕೊಠಡಿಗಳ ಮಂಜೂರಾತಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

997 (1115) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಗುಲ್ಬರ್ಗಾ ವಿಭಾಗದಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಇಲ್ಲಿಯವರೆಗೆ, ಈ ಹುದ್ದೆಗಳಿಗೆ ತುಂಬಿರುವ ಶಿಕ್ಷಕರ ಸಂಖ್ಯೆ ಎಷ್ಟು;

ಇ) ಎಷ್ಟು ಹುದ್ದೆಗಳು ಖಾಲಿ ಇವೆ; ಇವುಗಳನ್ನು ಯಾವಾಗ ತುಂಬುವ ಉದ್ದೇಶ ಸರ್ಕಾರಕ್ಕೆ ಇದೆ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಗುಲ್ಬರ್ಗಾ ವಿಭಾಗದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 34,767 ಶಿಕ್ಷಕರ ಹುದ್ದೆಗಳು ಮತ್ತು ಸರ್ಕಾರಿ ಪ್ರೌಢಶಾಲೆಗಳಿಗೆ 8340 ಶಿಕ್ಷಕರ ಹುದ್ದೆಗಳು ಮಂಜೂರಾಗಿದೆ.

ಆ) ಇಲ್ಲಿಯವರೆವಿಗೆ 31,810 ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು 6515 ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಇ) ಪ್ರಸ್ತುತ 2805 ಸರ್ಕಾರಿ ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರದಲ್ಲಿ ಈಗಾಗಲೇ ದಿ:11.01.2007 ರಂದು ಅಧಿಸೂಚನೆ ಹೊರಡಿಸಲಾಗಿದೆ. ಇದರ ಜೊತೆಗೆ ದಿ:01.02.2007 ರಲ್ಲಿ 152 ವಿಶೇಷ ಶಿಕ್ಷಕರನ್ನು ನೇಮಕಾತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ.

ಪ್ರಸ್ತುತ 1665 ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಇದರಲ್ಲಿ 1522 ಹುದ್ದೆಗಳು 2006–07ನೇ ಸಾಲಿನಲ್ಲಿ ನೇಮಕಾತಿಗಾಗಿ

ಅಧಿಸೂಚನೆಯನ್ನು ನೀಡಲಾಗಿದೆ. ಹಾಗೂ ದಿ:25/26.11.2006 ರಂದು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದೆ. ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಉಳಿದ 143 ಹುದ್ದೆಗಳನ್ನು ಬಡ್ತಿ ಮುಖಾಂತರ ಭರ್ತಿ ಮಾಡಲು ಆಸ್ಪದ ಇದೆ.

998 (1116) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 3,4,5 ಮತ್ತು 6ನೇ ಹಂತದಲ್ಲಿ ಮಂಜೂರಾಗಿರುವ ಗ್ರಾಮೀಣ ರಸ್ತೆಗಳ ಸಂಖ್ಯೆ ಎಷ್ಟು; (ರಾಜ್ಯದ ಜಿಲ್ಲಾವಾರು ಹಾಗೂ ರಾಯಚೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒಟ್ಟು ಕೇಂದ್ರ ಸರ್ಕಾರ ಮಂಜೂರು ಮಾಡಿದ ಹಣದ ಮೊತ್ತವೆಷ್ಟು; ಖರ್ಚಾದ ಮೊತ್ತವೆಷ್ಟು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ 3,4,5 ಮತ್ತು 6ನೇ ಹಂತದಲ್ಲಿ ಕ್ರಮವಾಗಿ 360,90,179 ಮತ್ತು 177 ಸಂಖ್ಯೆಯ ಗ್ರಾಮೀಣ ರಸ್ತೆಗಳು ಮಂಜೂರಾಗಿರುತ್ತವೆ. ರಾಜ್ಯದ ಜಿಲ್ಲಾವಾರು ಮತ್ತು ರಾಯಚೂರು ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2ರಲ್ಲಿ ನೀಡಲಾಗಿದೆ.

ಆ) ಹಂತ–3 ರಿಂದ ಹಂತ–6ರವರೆಗಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒಟ್ಟು ಕೇಂದ್ರ ಸರ್ಕಾರ ಮಂಜೂರು ಮಾಡಿದ ಹಣದ ಮೊತ್ತ ಮತ್ತು ಖರ್ಚಾದ ಮೊತ್ತವನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರಮ ಸಂಖ್ಯೆ	ಹಂತ	ಮಂಜೂರಾದ ಮೊತ್ತ (ರೂ.ಕೋಟಿಗಳಲ್ಲಿ)	ವೆಚ್ಚ (ರೂ. ಕೋಟಿಗಳಲ್ಲಿ)
1.	ಹಂತ–3	118.27	100.24
2.	ಹಂತ–4	101.17	23.80
3.	ಹಂತ–5	202.53	33.92
4.	ಹಂತ–6	330.72	ಟೆಂಡರ್ ಕರೆಯಲಾಗಿದೆ